**ದಿನಾಂಕಃ 17-09-2019 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಐ ಡಿ ಜೆ ವಕೀಲರಿಂದಃ**

8 ನೇ ಪ್ರತಿವಾದಿಗೆ ಮಾರಾಟ ಮಾಡಿದ ದಾವಾ ಆಸ್ತಿ 1 ಮತ್ತು 2 ನೇ ಪ್ರತಿವಾದಿಯರ ಆಸ್ತಿಯಾಗಿರುತ್ತದೆ ಎಂದರೆ ನಿಜ. ಸದರ ಆಸ್ತಿ 1 ಮತ್ತು 2 ನೇ ಪ್ರತಿವಾದಿಯರ ಆಸ್ತಿಯಾದ ಕಾರಣ ಅವರ ಜೀವಿತ ಕಾಲದಲ್ಲಿ ಅವರ ಮಕ್ಕಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಒಟ್ಟಾರೆ 3 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು ಇದ್ದು ಆದರೆ ಫಯಾಜ್ ಅಹ್ಮದ್ ಮತ್ತು ನಜೀರ್ ಅಹ್ಮದ್ ಎನ್ನುವವರು ಊರಲ್ಲಿ ಇಲ್ಲದ ಕಾರಣ ಕ್ರಯ ಪತ್ರ ನಿಪಿ 2 ಕ್ಕೆ ಸಹಿ ಮಾಡಿರುವುದಿಲ್ಲ. ಸದರ ದಾವಾ ಆಸ್ತಿಗೆ 1 ನೇ ಪ್ರತಿವಾದಿಯ ಹೆಸರು ಮಾತ್ರ ದಾಖಲಾಗಿರುತ್ತದೆ ಎಂದರೆ ನಿಜ. ಅದೇ ರೀತಿ ಉತಾರಗಳಲ್ಲಿ 2 ನೇ ಪ್ರತಿವಾದಿ ಫಾತೀಮಾಬೀ ಮತ್ತು ಅವರ ಮಕ್ಕಳ ಹೆಸರು ದಾಖಲಾಗಿದ್ದವು ಎಂದರೆ ನಿಜ.

1 ನೇ ಪ್ರತಿವಾದಿ ಜುಲೇಕಾಬೀ ನನ್ನ ತಾಯಿಯಾದ ಕಾರಣ ಅವರು ನನ್ನ ಜೊತೆ ವಾಸವಾಗಿರುತ್ತಾರೆ. ದಾವೆ ಹಾಕಿದ ನಂತರ 1 ನೇ ಪ್ರತಿವಾದಿ ಜುಲೇಕಾಬೀ ನನ್ನ ತಾಯಿ ಕೇಫಿಯತ್ ಸಲ್ಲಿಸಿರುತ್ತಾರೆ. ನಾನು ಅನಕ್ಷರಸ್ಥನಾಗಿರುತ್ತೇನೆ. ನನ್ನ ತಾಯಿ ಹಾಕಿದ ಕೇಫಿಯತ್ ನ್ನು ನನ್ನ ತಮ್ಮ ಫಯಾಜ್ ರವರ ಕಡೆಯಿಂದ ಓದಿಸಿ ತಿಳಿದುಕೊಂಡಿದ್ದೇನೆ. ನನ್ನ ತಾಯಿ ಹೆಬ್ಬೆಟ್ಟು ಗುರುತು ಹಾಕುತ್ತಾರೆ. ಈ ದಾವೆಯಲ್ಲಿ ನನ್ನ ತಾಯಿ ಯಾವುದೇ ತಕರಾರು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಸದರ ಕೇಫಿಯತ್ ನಲ್ಲಿ ಯಾವುದೇ ಹೆಬ್ಬೆಟ್ಟು ಗುರುತು ಇರುವುದಿಲ್ಲ ಎಂದರೆ ನಿಜ.

ಖರೀದಿ ಪತ್ರ ಮಾಡುವುದಕ್ಕಿಂತ 15 ದಿನಗಳ ಮುಂಚೆ ದಾವಾ ಆಸ್ತಿ ಮಾರಾಟ ಮಾಡುವ ಬಗ್ಗೆ ಮಾತುಕತೆಯಾಗಿರುತ್ತದೆ. ಮಾತುಕತೆ ದಿನ ರೂ.5,00,000/- ಸಂಚಕಾರ ಹಣವನ್ನು ಪಡೆದುಕೊಂಡು ಖರೀದಿ ಕರಾರು ಮಾಡಿಕೊಂಡಿರುತ್ತಾರೆ. ಸದರ ಖರೀದಿ ಕರಾರು ಪತ್ರಕ್ಕೆ ನಾನು, ನನ್ನ ತಾಯಿ, ನನ್ನ ಚಿಕ್ಕಮ್ಮ ಫಾತೀಮಾ ಹಾಗೂ ಅವರ ಮಕ್ಕಳು ಎಲ್ಲರೂ ಸಹಿ ಮಾಡಿರುತ್ತೇವೆ. ಸದರ ಖರೀದಿ ಕರಾರು ಪತ್ರದ ದಿನ ರೂ.51,50,000/- ಗಳಿಗೆ ಮಾರಾಟ ಮಾಡಬೇಕೆಂದು ಮಾತುಕತೆಯಾಗಿರುತ್ತದೆ. ಸದರ ಖರೀದಿ ಕರಾರು ಪತ್ರ ನಮ್ಮ ಬಳಿ ಉಳಿದಿರುತ್ತದೆ ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರ ಮಾಡಲು ಯಾವುದೇ ತೊಂದರೆ ಇಲ್ಲ ಎಂದರೆ ನಿಜ. ಖರೀದಿ ಪತ್ರದ ದಿನ 8 ನೇ ಪ್ರತಿವಾದಿ ಪಿಸೆ ರವರು ನನಗೆ ರೂ.51,50,000/- ಹಣವನ್ನು ಕೊಟ್ಟಿರುತ್ತಾರೆ. ಸದರ ಖರೀದಿ ಪತ್ರವನ್ನು ನಾವು ಹೇಳಿದಂತೆ ಬಾಂಡ್ ರೈಟರ್ ರವರು ಬರೆದಿರುತ್ತಾರೆ ನಾನು ಸದರ ಖರೀದಿ ಪತ್ರವನ್ನು ಓದಿಸಿ ತಿಳಿದುಕೊಂಡಿರುತ್ತೇನೆ. ಸದರ ಖರೀದಿ ಪತ್ರ ಬರೆಯುವ ಸಮಯಕ್ಕೆ ಮೊದಲ ಕರಾರು ಪತ್ರ ಮಾಡುವ ಕಾಲಕ್ಕೆ ಕೊಟ್ಟ ರೂ.5,00,000/- ಹಣದ ವಿಷಯವನ್ನು ಹೇಳಿ ಬೆರಸಿರುತ್ತೇವೆ ಹಾಗೂ

ಸದರ ರೂ.5,00,000/- ಹಣವನ್ನು ನಾವು ಹಂಚಿಕೊಂಡಿರುತ್ತೇವೆ. ಆ ರೂ.5,00,000/- ಹಣವನ್ನು ಕಡಿಮೆ ಮಾಡಿ ಉಳಿದ ಹಣವನ್ನು ಕೊಟ್ಟಿರುತ್ತಾರೆ. ಸದರ ಖರೀದಿ ಪತ್ರದ ದಿನ ಉಳಿದ ರೂ.44,50,000/- ಹಣವನ್ನು ಕೊಟ್ಟಿರುತ್ತಾರೆ. ಸದರ ರೂ.44,50,000/- ಹಣವನ್ನು ರೂ.2,000/- ಮತ್ತು ರೂ.500/- ಮುಖಬೆಲೆಯ ನೋಟುಗಳಲ್ಲಿ ಕೊಟ್ಟಿರುತ್ತಾರೆ. ಸದರ ರ.44,50,000/- ಹಣ ಮುಟ್ಟಿರುತ್ತದೆ ಎಂದು ಖರೀದಿ ಪತ್ರದಲ್ಲಿ ಹೇಳಿ ಬರೆಸಿರುತ್ತೇವೆ

ನಾನು ಸದರ ವ್ಯವಹಾರದಲ್ಲಿ ಯಾವುದೇ ರೀತಿಯ ಯಾವುದೇ ಬ್ಯಾಂಕಿನ ಚಕ್ ನ್ನು ನೋಡಿರುವುದಿಲ್ಲ. 8 ನೇ ಪ್ರತಿವಾದಿ ಪಿಸೆಯವರು ನಮಗೆ ಚಕ್ ಮೂಲಕ ಯಾವುದೇ ಹಣ ಕೊಟ್ಟಿರುವುದಿಲ್ಲ. ಆದರೆ ನಮ್ಮ ತಾಯಿ ಮತ್ತು ಚಿಕ್ಕಮ್ಮ ರವರ ಹೆಸರಿನಲ್ಲಿ ಕಾರ್ಪೋರೇಶನ್ ಬ್ಯಾಂಕ್ ನಲ್ಲಿ ಖಾತೆ ತೆರೆದು ಅವರ ಖಾತೆಗೆ ಜಮಾ ಮಾಡಿರುತ್ತಾರೆ. ನನ್ನ ತಾಯಿ ಹೊಂದಿರುವ ಖಾತೆಗೆ ರೂ.25,00,000/- ಮತ್ತು ನಮ್ಮ ಚಿಕ್ಕಮ್ಮ ಫಾತೀಮಾ ರವರ ಖಾತೆಗೆ ರೂ.25,00,000/- ಜಮಾ ಆಗಿರುತ್ತದೆ. ಆದರೆ ಪುನಃ ಖರೀದಿ ದಿನ ನನ್ನ ತಾಯಿ ಖಾತೆಗೆ ರೂ.24,00,000/- ಮತ್ತು ನಮ್ಮ ಚಿಕ್ಕಮ್ಮನ ಖಾತೆಗೆ ರೂ.24,00,000/- ಜಮಾ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಬಳಿ ನಮ್ಮ ತಾಯಿ ಹೊಂದಿದ ಪಾಸ್ ಪುಸ್ತಕ ಇರುತ್ತದೆ. ಹಣ ಜಮಾ ಆಗಿದೆ ಎಂದು ತೋರಿಸಲು ಪಾಸ್ ಪುಸ್ತಕ ಹಾಜರಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ನಿಜ. ಸದರ ವಿಷಯವನ್ನು ನಾವು ಖರೀದಿ ಪತ್ರದಲ್ಲಿ ಬರೆಸಿರುವುದಿಲ್ಲ ಆದರೆ ಹಣದ ವಿಷಯ ಮಾತ್ರ ಬರೆಸಿರುತ್ತೇವೆ ಖರೀದಿ ಪತ್ರದಲ್ಲಿ ಪಿಸೆಯವರು 48 ಲಕ್ಷ ರೂಪಾಯಿ ಹಣ ಕೊಟ್ಟಿರುತ್ತೇವೆ ಎಂದು ಹೇಳಿ ಬರೆಸಿರುತ್ತಾರೆ. ನಾನು ಸದರ 48 ಲಕ್ಷ ರೂಪಾಯಿ ಹಣವನ್ನು ಹಣದ ರೂಪದಲ್ಲಿ ಕೊಟ್ಟಿರುತ್ತಾರೆ ಅಥವಾ ಬೇರೆ ರೂಪದಲ್ಲಿ ಕೊಟ್ಟಿರುತ್ತಾರೆ ಎಂದು ಬರೆಸಿದ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ.

8 ನೇ ಪ್ರತಿವಾದಿಯರೊಂದಿಗೆ ಮಾತುಕತೆ ಮಾಡುವುದಕ್ಕಿಂತ 8 ದಿನಗಳ ಮುಂಚೆ ದಾವಾ ಆಸ್ತಿಯನ್ನು ಮಾರಾಟ ಮಾಡುತ್ತಿದ್ದೇವೆ ಎಂದು ವಾದಿಯರಿಗೆ ಕೇಳಿರುತ್ತೇವೆ. ಸದರ 8 ನೇ ಪ್ರತಿವಾದಿಯರೊಂದಿಗೆ ಮಾತನಾಡುವುದಕ್ಕಿಂತ ಮುಂಚೆ ವಾದಿಯರು ಹಾಕಿದ ದಾವೆಯ ನೋಟೀಸ್ ಗಳು ನಮಗೆ ಬಂದಿದ್ದವು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಈಗಾಗಲೇ 8 ನೇ ಪ್ರತಿವಾದಿಯರು ತಮ್ಮ ಸಾಕ್ಷಿ ನುಡಿದಿರುತ್ತಾರೆ, ನಾನು ಅದರ ಬಗ್ಗೆ ತಿಳಿದಕೊಂಡಿರುತ್ತೇನೆ. ನಮ್ಮ ತಾಯಿಗೆ ದಾವಾ ಆಸ್ತಿ ರಾಜಿ ಮೂಲಕ ಬಂದ ವಿಚಾರ ಗೊತ್ತು ಹಾಗೂ ಆ ರಾಜಿ ಪತ್ರದಲ್ಲಿ ಇರುವ ಎಲ್ಲಾ ಕರಾರುಗಳ ಬಗ್ಗೆ ನನಗೆ ಗೊತ್ತು. ವಾದಿಯರು ನಮ್ಮ ಬೇರೆ ಚಿಕ್ಕಮ್ಮಂದಿರು ಆಸ್ತಿಗಳನ್ನು ಮಾರಾಟ ಮಾಡುವಾಗ ಒಂದು ದಾವೆ ಹಾಕಿದ್ದರು ಎಂದರೆ ನಿಜ. ಅಸಲು ದಾವಾ ನಂ.102/1999 ದಾವೆ ನಡೆಯುವ ಕಾಲದಲ್ಲಿ ವಾದಿ ಹೇಳಿದ ಹಾಗೆ ಅವರ ಮಗನ ಹೆಸರಿನಲ್ಲಿ ಸದರ ದಾವೆಯ ಪ್ರತಿವಾದಿಗಳು ಆಸ್ತಿಗಳನ್ನು ಖರೀದಿ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ ಆದರೆ ವಾದಿಯ ಮಗ ಜಿಲಾನಿರವರು ಸ್ವಂತಕ್ಕೆ ಖರೀದಿ

ಮಾಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ವಾದಿ ಮತ್ತು ಅವರ ಮಗ ಜಿಲಾನಿ ಒಟ್ಟಿಗೆ ವಾಸವಾಗಿರುತ್ತಾರೆ ಅಥವಾ ಬೇರೆ ಬೇರೆಯಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರ ದಾವಾ ಆಸ್ತಿ 8 ನೇ ಪ್ರತಿವಾದಿಯರೊಂದಿಗೆ ಮಾತುಕತೆ ಮಾಡುವುದಕ್ಕಿಂತ ಮುಂಚೆ ನಾವೇ ವಾದಿಯರಿಗೆ ಮಾರಾಟ ಮಾಡುತ್ತೇವೆ ಎಂದು ಕೇಳಲು ಅವರ ಮನೆಗೆ ಹೋಗಿದ್ದೆವು.

ವಾದಿಯರು ನಾವು 8 ನೇ ಪ್ರತಿವಾದಿಯರೊಂದಿಗೆ ಖರೀದಿ ಕರಾರು ಪತ್ರ ಮಾಡಿಕೊಂಡ ನಂತರ ಶಿಡ್ಲು ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟಿರುತ್ತಾರೆ. ನಾವು ಮಾತುಕತೆ ಮಾಡಿಕೊಂಡು 4 ರಿಂದ 5 ದಿನಗಳ ನಂತರ ವಾದಿಯರು ಶಿಡ್ಲು ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿರುತ್ತಾರೆ. ಆದರೆ ಪುನಃ ಸಾಕ್ಷಿಯು ನಾವು ವಾದಿಯರಿಗೆ ಸಂಚಕಾರ ಆದರೂ ಕೂಡ ನಿನಗೆ ನಾವು ಆಸ್ತಿ ಮಾರಾಟ ಮಾಡಲು ಸಿದ್ದರಿದ್ದೇವೆ ಎಂದು ಹೇಳಿರುತ್ತೇವೆ. ಸದರ ವಾದಿಯರು ಪ್ರಕಟಣೆ ಕೊಟ್ಟ ನಂತರ ನಾವು ಯಾವುದೇ ದಿನಪತ್ರಿಕೆಯಲ್ಲಿ ಪ್ರಕಟಣೆ ಮೂಲಕ ಉತ್ತರಿಸಿಲ್ಲ. ಶಿಡ್ಲು ಪತ್ರಿಕೆಯಲ್ಲಿ ಪ್ರಕಟಣೆಯಾದ ವಿಷಯ 8 ನೇ ಪ್ರತಿವಾದಿಗೆ ಗೊತ್ತಿತ್ತು ಎಂದರೆ ನಿಜ. ಅವರು ಕೂಡ ಯಾವುದೇ ಉತ್ತರವನ್ನು ಪ್ರಕಟಣೆ ಮೂಲಕ ಕೊಟ್ಟಿರುವುದಿಲ್ಲ ಎಂದರೆ ನಿಜ.

8 ನೇ ಪ್ರತಿವಾದಿ ಪಿಸೆಯವರು ದಾವಾ ಆಸ್ತಿಯನ್ನು ವಾದಿಯರಿಗೆ ಮರಳಿ ಕೊಟ್ಟರೆ ನಮಗೆ ಯಾವುದೇ ತೊಂದರೆ ಇರುವುದಿಲ್ಲ. ಸದರ 8 ನೇ ಪ್ರತಿವಾದಿಯರು ಅವರಿಗೆ ಲುಕ್ಸಾನು ಅಗುತ್ತದೆ ಅಥವಾ ಇಲ್ಲವೆಂದು ನಮ್ಮ ಜೊತೆ ಚರ್ಚಿಸಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನನಗೆ ಗೊತ್ತು.

ಪ್ರಶ್ನೆಃ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪಿಸೆಯವರು ಪ್ರಾಮಾಣಿಕ ಖರೀದಿದಾರು ಇರುತ್ತಾರೆ ಅವರು ಮಾಡಿದ ಖರೀದಿ ರದ್ದಾದರೆ ಅವರಿಗೆ ತುಂಬಬಾರದ ಲುಕ್ಸಾನು ಆಗುತ್ತದೆ ಎಂದು ಹೇಳಿ ಬರೆಸಿರುತ್ತೀರಾ ಎಂಬ ಪ್ರಶ್ನೆಗೆ ಪ್ರತಿವಾದಿ ಪರ ವಕೀಲರು ಆ ರೀತಿ ಪ್ರಶ್ನೆ ಕೇಳಲು ಬರುವುದಿಲ್ಲ ಎಂದು ತಕರಾರು ಮಾಡಿರುತ್ತಾರೆ ಅದಕ್ಕೆ ವಾದಿ ಪರ ವಕೀಲರು ಸಾಕ್ಷಿಯು ಅನಕ್ಷರಸ್ಥರಾದ ಕಾರಣ ಪ್ರಶ್ನೆ ಕೇಳಲು ಬರುತ್ತದೆ ಎಂದು ಹೇಳಿದ್ದರಿಂದ ಅನುಮತಿ ನೀಡಲಾಯಿತು.

ಉತ್ತರಃ ಸದರ ಪ್ರಶ್ನೆಗೆ ಸಾಕ್ಷಿಯು ನನ್ನ ಪ್ರಮಾಣ ಪತ್ರದಲ್ಲಿ ಅವರಿಗೆ ಲುಕ್ಸಾನು ಆಗುತ್ತದೆ ಎಂದು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ.

ವಾದಿ ನನ್ನ ಮಾವನಿಗೆ ಮೊದಲಿನಿಂದಲೂ ದಾವಾ ಆಸ್ತಿ ಘರಾಣೇದ ಆಸ್ತಿಯಾದ ಕಾರಣ ಬೇರೆಯವರಿಗೆ ಹೋಗಬಾರದು ಎಂಬ ಆಸೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು

ಒಂದೇ ಕಟ್ಟಡದಲ್ಲಿ ಬರುವ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಆ ಆಸ್ತಿಯ ಗೋಡೆಗಳು ಸಾಮೂಹಿಕ ಗೋಡೆಗಳು ಇರುತ್ತವೆ ಎಂದರೆ ನಿಜ. ಸದರ ಆಸ್ತಿಯ ಮೇಲ್ಛಾವಣಿ ಒಂದೆಯಾಗಿರುತ್ತದೆ ಎಂದರೆ ಸರಿಯಲ್ಲ ಆದರೆ ಬೇರೆ ಬೇರೆಯಾಗಿರುತ್ತದೆ. ಸದರ ಕಟ್ಟಡಕ್ಕೆ ಮೆಟ್ಟಿಲುಗಳು ಮತ್ತು ಓಡಾಡಲು ಖುಲ್ಲಾ ಜಾಗೆ ಸಾಮೂಹಿಕವಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಪಾಲಿಗೆ ಬಂದ ಆಸ್ತಿಯಲ್ಲಿ ಬೇರೆಯಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಮೊದಲು ಮಾಡಿಕೊಂಡ ದಾವೆಗಳಲ್ಲಿರುವ ರಾಜಿ ಪತ್ರ ಅಥವಾ 8 ನೇ ಪ್ರತಿವಾದಿಯರಿಗೆ ಬರೆದುಕೊಟ್ಟ ಖರೀದಿ ಪತ್ರದಲ್ಲಿ ಈ ವಿಷಯವನ್ನು ಹೇಳಿ ಬರೆಸಿರುವುದಿಲ್ಲ ಎಂದರೆ ನಿಜ. ಸದರ ಎಲ್ಲಾ ಆಸ್ತಿಗಳು ಸಾಮೂಹಿಕವಾಗಿದ್ದರೂ ಕೂಡ ಪ್ರತ್ಯೇಕವಾಗಿ ಬೇರೆಬೇರೆಯಾಗಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಸಲು ದಾವಾ ಸಂಖ್ಯೆ 14/1995 ರಲ್ಲಿ ರಾಜಿಯಾದ ನಂತರ 6 ತಿಂಗಳಲ್ಲಿ ನಮ್ಮ ತಾಯಿ ಹಿಸ್ಸೆಯ ಕಟ್ಟಡಗಳನ್ನು ಕಟ್ಟಿರುತ್ತೇವೆ. ಸದರ ದಾವಾ ಆಸ್ತಿಗಳಲ್ಲಿ ನಾವು ಯಾವುದೇ ಕಟ್ಟಡ ಮಾಡಿಕೊಂಡಿರುವುದಿಲ್ಲ ಕೇವಲ ವಾದಿಯರು ಮಾತ್ರ ಕಟ್ಟಡ ಮಾಡಿಕೊಂಡಿರುತ್ತಾರೆ ವಾದಿಯರು ದಾವಾ ಆಸ್ತಿಯನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡುವುದಕ್ಕಿಂತ ಮುಂಚೆ ನಮಗೆ ಕೊಡಿ ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆದರೆ ನಾವೇ ಹೋಗಿ ಕೇಳಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ. ವಾದಿಯರು ಕೇಳಿದರೂ ಕೂಡ ನಾವು ಬೇರೆಯವರೊಂದಿಗೆ ವ್ಯವಹಾರ ಮಾಡುತ್ತಿದ್ದುದರಿಂದ ಅಸಲು ದಾವಾ ಸಂಖ್ಯೆ 33/2016 ರಂತೆ ಮತ್ತೊಂದು ದಾವೆ ಹೂಡಿದ್ದರು ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಯಾವುದೇ ಆಸ್ತಿಯನ್ನು ಮಾರಾಟ ಮಾಡಬಾರದು ಎಂದು ನಿರ್ಬಂದಕಾಜ್ಞೆ ಆದೇಶ ಇತ್ತು ಎಂದರೆ ಸರಿಯಲ್ಲ. ಆ ದಾವೆಯಲಿಸ್ಲಿ ನನ್ನ ತಾಯಿ ಮತ್ತು ಚಿಕ್ಕಮ್ಮ ಹಾಜರಾಗಿ ತಕರಾರು ಸಲ್ಲಿಸಿದ ನಂತರ ನ್ಯಾಯಾಲಯವು ಮಧ್ಯಂತರ ಆದೇಶವನ್ನು ರದ್ದುಮಾಡಿರುತ್ತಾರೆ ಎಂದರೆ ಸರಿಯಲ್ಲ. ತದಾದ ನಂತರ ಆ ದಾವೆಯನ್ನು ಹಿಂದುಪಡೆದು ನಾವು ಖರೀದಿ ಪತ್ರ ಮಾಡಿದ್ದಕ್ಕಾಗಿ ವಾದಿಯರು ಈ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರು ದಾವೆಯಲ್ಲಿ ಈ ಎಲ್ಲಾ ವಿಷಯವನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದು ಗೊತ್ತಿದ್ದು ನಮ್ಮ ತಾಯಿಯನ್ನು ಸಾಕ್ಷಿ ಮಾಡಿಸಿದರೆ ಅವರು ಒಪ್ಪಿಕೊಳ್ಳುತ್ತಾರೆ ಎಂಬ ಉದ್ದೇಶದಿಂದ ನಾನ ಅವರ ಸಾಕ್ಷಿ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿ ಅಥವಾ ನನ್ನ ಚಿಕ್ಕಮ್ಮ ಈ ದಾವೆಯಲ್ಲಿ ಯಾವುದೇ ಕೇಫಿಯತ್ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರ ಆದ ನಂತರ ವಾದಿಯರು ನನ್ನ ತಾಯಿ ಮತ್ತು 8 ನೇ ಪ್ರತಿವಾದಿ ಪಿಸೆ ಮತ್ತು ನನ್ನ ಚಿಕ್ಕಮ್ಮ ರವರಿಗೆ ದಾವಾ ಆಸ್ತಿ ಖರೀದಿ ಮಾಡಲು ಇಚ್ಚೆ ಹೊಂದಿರುತ್ತೇನೆ ಎಂದು ಹಿರಿಯರೊಂದಿಗೆ ಕೇಳಲು ಬಂದಿರುತ್ತಾರೆ ಎಂದರೆ ಸರಿಯಲ್ಲ. ತದಾದ ನಂತರ ವಾದಿಯರು ಎಲ್ಲರಿಗೂ ಈ ದಾವೆ ಮಾಡುವುದಕ್ಕಿಂತ ಮುಂಚೆ ತಮ್ಮ ವಕೀಲರ ಮೂಲಕ ನೋಟೀಸ್ ಕೂಡ ನೀಡಿರುತ್ತಾರೆ ಎಂದರೆ

ಸರಿಯಲ್ಲ. ಸದರ ದಾವಾ ಆಸ್ತಿ ಬಗ್ಗೆ ನಮ್ಮ ಮತ್ತು 8 ನೇ ಪ್ರತಿವಾದಿಯರ ನಡುವೆ ಖರೀದಿ ಪತ್ರ ಆಗುವುದಕ್ಕಿಂತ ಮುಂಚೆ ಅಥವಾ ಆದ ಮೇಲೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಹೆಚ್ಚಿ ನ ಹಣವನ್ನು ತೋರಿಸಿ ಖರೀದಿ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ ಖರೀದಿ ಪತ್ರದ ದಿನ 8 ನೇ ಪ್ರತಿವಾಯರು ನನ್ನ ತಾಯಿ ಹಾಗೂ ಚಿಕ್ಕಮ್ಮನ ಹೆಸರಿಗೆ ಅವರ ಖಾತೆಗೆ ಯಾವುದೇ ಹಣ ಸಂದಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.